# ಡಿಸೈನರ್ ಬ್ಲೌಸ್‌ಗಳ ಹಂಗಾಮ

■ ಸಾವಿತ್ರಮ್ಮ ಕೆ. ವಿಭೂತಿ

ದೇವಾನುದೇವತೆಗಳ, ದೇವಸ್ಥಾನದ ಚಿತ್ರಣವಿರುವ ಬ್ಲೌಸ್‌ಗಳ ಕಾರುಬಾರು ಇದೀಗ ಫ್ಯಾಷನ್ ಲೋಕದಲ್ಲಿ ನಡೆಯುತ್ತಿದೆ. ಮನಕ್ಕೊಪ್ಪುವ, ಬಣ್ಣ, ವಿನ್ಯಾಸ, ಅಳತೆಯ ಬ್ಲೌಸ್‌ಗಳು ಫ್ಯಾಷನ್‌ಪ್ರಿಯರ ಮನಗೆಲ್ಲುತ್ತಿದೆ; ಮಾರುಕಟ್ಟೆಯಲ್ಲಿ ಪೈಪೋಟಿಯನ್ನೂ ನಡೆಸುತ್ತಿದೆ.



ಮನಕ್ಕೊಪ್ಪುವ ಕಲರ್, ಸೀರೆಗೊಪ್ಪುವ ಬ್ಲೌಸ್.. ಇದು ಮಹಿಳೆಯರ ಉಡುಪು ಪ್ರಪಂಚದಲ್ಲಿ ಎಲ್ಲರೂ ಹಂಬಲಿಸುವ ಉಡುಗೆ. ಬ್ಲೌಸ್‌ಗಳಲ್ಲಿ ಈಗ ರೆಡಿಮೇಡ್ ಬಟ್ಟೆಗಳದ್ದೇ ಕಾರುಬಾರು. ಯಾವ ಅಳತೆ, ವಿನ್ಯಾಸದ ಆಕಾರದ, ಬಣ್ಣದ ಬ್ಲೌಸ್ ಬೇಕಾದರೂ ಸಿದ್ಧವಾಗಿ ಮಾರುಕಟ್ಟೆಯಲ್ಲಿ ಲಭ್ಯ. ಹೀಗಾಗಿ ಫ್ಯಾಷನ್‌ಪ್ರಿಯರು ಒಂದು ಬ್ಲೌಸ್‌ಗಾಗಿ ಟೈಲರ್ ಬಳಿ ಹೋಗಿ ಅಳತೆ ಕೊಟ್ಟು ತಿಂಗಳುಗಟ್ಟಲೆ ಕಾಯಬೇಕಿಲ್ಲ. ಮನಸ್ಸಿಗೊಪ್ಪುವ ಬಣ್ಣದ ವಿನ್ಯಾಸದ ಸುಂದರವಾಗಿ ಸಿದ್ಧಪಡಿಸಿದ ರೆಡಿಮೇಡ್ ಬ್ಲೌಸ್‌ಗಳು ಇದೀಗ ಲಭ್ಯ.

ಹಬ್ಬಗಳ ಪರ್ವದಲ್ಲಿ ಅಂತೂ ಮಹಿಳೆಯರ ಸೀರೆ ಶಾಪಿಂಗ್‌ಗೆ ಕೊನೆಯೆಂಬುದೇ ಇಲ್ಲ. ಹಬ್ಬಗಳ ದಿನಗಳಲ್ಲಿ ಬಳಸಲು ಜರತಾರಿ ಸೀರೆ ಏನೋ ರೆಡಿ, ಅದರೆ ಅದಕ್ಕೆ ಒಪ್ಪುವ ರವಿಕೆಯದ್ದೇ ಕೊರತೆ ಎಂದು ಈಗ ಗೊಣಗುವಂತಿಲ್ಲ. ಈಗಿನ ಫ್ಯಾಷನ್